ಒ ಎಸ್ 10/2017 ಪಿ.ಡಬ್ಲ್ಯೂ 1

ಇಂದು ದಿಃ 07.03.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಸಲ್ಲಿಸಿದ ದಾವೆ ಕಾನೂನು ಪ್ರಕಾರ ಊರ್ಜಿತವಲ್ಲದ ಕಾರಣಕ್ಕಾಗಿ ಒ ಎಸ್ 57/2018 ರ ಆಸ್ತಿಯನ್ನು ಇಲ್ಲಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ. ಈ ಹಿಂದೆ ಸಲ್ಲಿಸಿದ್ದ ಒ ಎಸ್ 112/2007 ರ ತೀರ್ಪು ಮತ್ತು ಡಿಕ್ರಿಯಲ್ಲಿ ಒ ಎಸ್ 57/2018 ರ ಆಸ್ತಿಯ ಬಗ್ಗೆ ತೀರ್ಮಾನವಾಗಿಲ್ಲ ಎಂಬ ವಿಚಾರ ನನಗೆ ಗೊತ್ತು ಎಂದರೆ 2018 ರಲ್ಲಿ ಗೊತ್ತಾಯಿತು ಎಂದು ಸಾಕ್ಷಿ ನುಡಿಯುತ್ತಾರೆ. ನಿ ಡಿ 2 ಕ್ಕೆ ಸಂಬಂಧಿತ ದಾಖಲೆ ನನ್ನ ಬಳಿ ಇವೆ. ಆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲೆ ಹಾಜರು ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ರಿಂದ 9 ನೇ ಪ್ರತಿವಾದಿಗಳ ಹೆಸರಿನಲ್ಲಿ 2001 ರಲ್ಲಿ ಸರ್ವೆ ನಂಬರ್ 165 ಮತ್ತು 170 ರ ಆಸ್ತಿಗಳು ಖಾತೆಯಾಗಿವೆ. ವಿಚಾರಗಳು ತಿಳಿದ ನಂತರ ನಾನು ಅದನ್ನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಈ ನ್ಯಾಯಾಲಯದಲ್ಲಿ ಮಾತ್ರ ಪ್ರಕರಣ ದಾಖಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಒ ಎಸ್ 57/2018 ರ ವಾದಿಗೆ ನಾನು ಮೋಸ ಮಾಡುವ ಉದ್ದೇಶದಿಂದ ನಾನು ಆ ರೀತಿ ಖಾತೆ ಬದಲಾವಣೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ 55-60 ಕೊರಣೆಗಾಲದಲ್ಲಿ ವಾಸವಿದ್ದಾರೆ. ದಾವೆ ದಾಖಲಿಸಿದಾಗ ನನ್ನ ತಂದೆ ಬಸಾಪುರದಲ್ಲಿ ವಾಸವಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಅವರೆಂದರೆ ಲಿಂಗಮ್ಮ ಮತ್ತು ಎರಡನೆಯವರು ಕಮಲಮ್ಮ. ನನ್ನ ತಂದೆಗೆ ಇನ್ನೊಬ್ಬ ಹೆಂಡತಿಯಿದ್ದು ಅವರು ಕೊರಣೆಗಾಲದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆ 55 ವರ್ಷಗಳಿಂದ ಕೊರಣೆಗಾಲದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾತನಿಗೆ ಇಬ್ಬರು ಹೆಂಡತಿಯರು. ಅವರೆಂದರೆ ಪುಟ್ಟಮ್ಮ ಮತ್ತು 2 ನೇಯವರು ಅಬ್ಬಮ್ಮ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಚನ್ನಬಸಮ್ಮ. ಮತ್ತು ಎರಡನೇ ಯವರು ಪುಟ್ಟಮ್ಮ. ಮೊದಲನೆ ಹೆಂಡತಿ ಪುಟ್ಟಮ್ಮನಿಗೆ 5 ಜನ ಮಕ್ಕಳು ಎಂದರೆ ಸರಿ ಆದರೆ ಅವರು ಮೊದಲನೆ ಹೆಂಡತಿ ಅಲ್ಲ. ಒಂದು ಗಂಡು ಮತ್ತು 4 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಆ ಗಂಡು ಮಗನೇ ನನ್ನ ತಂದೆ ಎಂದರೆ ಸರಿ. ಈರಮ್ಮ, ಗಂಗಮ್ಮ, ಮನೆನಿಂಗಮ್ಮ ಎಂದರೆ ಸರಿ. ನನ್ನ ಅಜ್ಜಿ ಪುಟ್ಟಮ್ಮನವರು ತೀರಿಹೋದ ನಂತರ ನನ್ನ ತಾತ ಅಬ್ಬಮ್ಮನವರನ್ನು ಮದುವೆ ಆದರು ಎಂದರೆ

ನನ್ನ ತಾತ ಮೊದಲು ತೀರಿಹೋದರು. ಅಬ್ಬಮ್ಮ ಯಾರು ಎಂದು ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಬ್ಬಮ್ಮನ ಮಗನೇ ಒ ಎಸ್ 57/2018 ರ ವಾದಿ ಶಿವಣ್ಣ ಎಂದರೆ ಸುಳ್ಳು. ಶಿವಣ್ಣನಿಗೆ ಆಸ್ತಿಯಲ್ಲಿ ಸಮನಾದ ಹಕ್ಕು ಇದೆ ಎಂದು ನನ್ನ ತಂದೆ ಬರೆದು ಹಾಕಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಶಿವಣ್ಣಗೆ ಆಸ್ತಿಯಲ್ಲಿ ಭಾಗ ಇದೆ ಎಂದು ಆ ರೀತಿ ಬರೆದುಹಾಕಿದ್ದೀಯಾ ಎಂದು ಇದೆ ನ್ಯಾಯಾಲಯದಲ್ಲಿ ಹಲ್ಲೆ ಮಾಡಿದ್ದೆ ಎಂದರೆ ಸರಿಯಲ್ಲ. ಆ ದಿನ ನನ್ನನ್ನು ಠಾಣೆಗೆ ಕರೆದಿದ್ದರು ಎಂದರೆ ಸರಿ. ಆ ಸಂಬಂಧ ನನ್ನ ವಿರುದ್ಧ ದೂರು ದಾಖಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಾತ ಮಾದಪ್ಪನಿಗೆ ಮೊದಲ ಹೆಂಡತಿಯ 5 ಜನ ಮಕ್ಕಳು ಮತ್ತು 2 ನೇ ಹೆಂಡತಿಗೆ ಒಬ್ಬ ಮಗ ಬಿಟ್ಟು ಬೇರೆಯವರು ಯಾರೂ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.